

# ಕಸ್ತೂರ್‌ಬಾ v/s ಗಾಂಧಿ

■ ಬರಗೂರು ರಾಮಚಂದ್ರಪ್ಪ

ಕಲೆ: ಮನೋಹರ ಕೆ. ಆಚಾರ್ಯ

## ಕಸ್ತೂರ್ ಬೆಳಕಾದರು ಗಾಂಧಿ ಒಂಟಿಯಾದರು

ದೇವದಾಸ್‌ಗೆ ಏನು ಏಳಬೇಕೆಂದು ತಿಳಿಯಲಿಲ್ಲ. ಒತ್ತಾಯಿಸಲು ಪದಗಳು ಬರಲಿಲ್ಲ. ಕಣ್ಣೀರು ಬಂದು ಕೈಮುಗಿದ.

ಮಾತಾಡಲಾರದೆ ತುಟಿಗಳು ಕಂಪಿಸಿದವು. ಕಣ್ಣುಗಳೇ ಕೋರಿಕೆಯಾದವು. ಕಸ್ತೂರ್ ಬಾ ಮಗನ ಕೈಗಳನ್ನು ಹಿಡಿದುಕೊಂಡರು. ಆತನ ದುಃಖ ತುಂಬಿದ ಮುಖವನ್ನು ನೋಡಿದರು.

ಆನಂತರ ಕಣ್ಣೀರು ಒರೆಸಿದರು. ತಾಯಿಯ ವಾತ್ಸಲ್ಯದ ನಡೆಯಿಂದ ದೇವದಾಸನಿಗೆ ಮತ್ತಷ್ಟು ದುಃಖ ಒತ್ತರಿಸಿ ಬಂತು. ಕಸ್ತೂರ್‌ಬಾ ಸಮಾಧಾನಿಸುತ್ತ ಹೇಳಿದರು:

'ಅಳಬೇಡ ಮಗ. ಒಂದ್ ಕೆಲ್ಸ ಮಾಡು, ದಿನಾ ಒಂದ್ ಬಾಳೆಹಣ್ಣು, ಒಂದ್ ಲೋಟ ಹಾಲು ತಂದ್ಕೊಡು. ನಿಮ್ಮ ಅಪ್ಪ ಬರೋವರ್ಗೂ ಅಷ್ಟು ಸಾಕು ನನಗೆ.'

ದೇವದಾಸ್‌ಗೆ, ಅಮ್ಮ ಅಷ್ಟಾದರೂ ಕೇಳಿದಳಲ್ಲ ಅಂತ ಒಂದಿಷ್ಟು ಸಮಾಧಾನವಾಯಿತು. 'ಈಗ್ಲೇ ತರ್‍ತೇನೆ' ಅಂತ ಹೋಗಿ ತಂದೇ ಬಿಟ್ಟ. ಬಾಳೆಹಣ್ಣು ತಿಂದು ಹಾಲು ಕುಡಿಯುವವರೆಗೂ ಅಮ್ಮನ ಮುಂದೆಯೇ ಕೂತಿದ್ದ.

ಹೀಗೆ ಎರಡು ಮೂರು ದಿನ ತಳ್ಳಿದಾಗ ಮಹದೇವದೇಸಾಯಿ ಕಸ್ತೂರ್‌ಬಾ ಅವರ ಬಳಿಗೆ ಬಂದರು. ಕಸ್ತೂರ್‌ಬಾ ಜೊತೆ ದೇವದಾಸ್ ಮತ್ತು ದುರ್ಗಾ ಕೂತಿದ್ದರು. ಮಹದೇವ ದೇಸಾಯಿ ಮಾತಾಡುವುದಕ್ಕೆ ಮುಂಚೆಯೇ ಕಸ್ತೂರ್‌ಬಾ

'ಮಹದೇವ... ಬಾಪು?' ಎಂದು ಪ್ರಶ್ನಾರ್ಥಕವಾಗಿ ನೋಡಿದರು.

ಮಹದೇವ ದೇಸಾಯಿ ಸಂತೋಷದಿಂದ ಹೇಳಿದರು:

ಬಾಪು ಜೀವ ಉಳೀತು ತಾಯಿ
ಕಸ್ತೂರ್‌ಬಾ ಕಣ್ಣು ಅರಳಿದವು;
ದೇವದಾಸ್ ಆನಂದಿಸಿದ.
ದುರ್ಗಾ ಸಮಾಧಾನಪಟ್ಟರು.
ಕಸ್ತೂರ್‌ಬಾ ಕಣ್ಣಲ್ಲಿ ಆನಂದಬಾಷ್ಪ;
ಮನದಲ್ಲಿ ಸಂತೋಷ ಪುಷ್ಪ.

ಕಡೆಗೆ ಅಂಬೇಡ್ಕರ್ ಅವರು ಒಂದು ಬೇಡಿಕೆ ಕೈಬಿಟ್ಟರು. ಒಪ್ಪಂದ ಆಯ್ತು. ಬಾಪು ಜೀವ ಉಳೀತು.

ಮಹದೇವ ದೇಸಾಯಿ ವಿವರಿಸಿದರು.

ಕಸ್ತೂರ್‌ಬಾ ತಕ್ಷಣ ಪ್ರತಿಕ್ರಿಯಿಸಿದರು.

ಜೀವ ಉಳೀತು ಅಲ್ಲ. ಜೀವ ಉಳ್ಸಿದ್ರು ಅನ್ನು. ಅಂಬೇಡ್ಕರ್ ಸಾಹೇಬ್ರು ಬಾಪು ಜೀವ ಉಳ್ಸಿದ್ರು. ಅವ್ರು ದೊಡ್ಡ ಮನುಷ್ಯರು. ಪುಣ್ಯಾತ್ಮರು ಎಂದು ಹೇಳುತ್ತ ಭಾವುಕರಾದರು.

ಎದ್ದುನಿಂತರು.

'ಅಂಬೇಡ್ಕರ್ ಸಾಹೇಬ್ರೇ...'

ಎನ್ನುತ್ತ ನಿಂತಲ್ಲಿಂದಲೇ ನಮಸ್ಕರಿಸಿದರು.

* * *

ಸಬರಮತಿಯ ಇರುಳುಗತ್ತಲಲ್ಲಿ ಅಂಬೇಡ್ಕರ್ ನೆರಳು ಓಡಾಡಿದಂತಾಯಿತು. ಕಸ್ತೂರ್‌ಬಾ ಕೈಮುಗಿದರು. ಗಾಂಧಿ ನೋಡಿದರು. ಅಚ್ಚರಿಯಿಂದ ಹೇಳಿದರು:

'ಯಾರಿಗೆ ಕೈ ಮುಗೀತಾ ಇದ್ದೀಯ?'

'ಅಂಬೇಡ್ಕರ್ ಸಾಹೇಬ್ರಿಗೆ.'

ಗಾಂಧಿ ಪ್ರತಿಕ್ರಿಯಿಸದೆ ಮುಂದಿನ ಮಾತನ್ನು ನಿರೀಕ್ಷಿಸಿದರು.

'ನಿಮ್ ಜೀವ ಉಳ್ಸಿದ್ರಲ್ಲ, ಅದಕ್ಕೆ.' ಕಸ್ತೂರ್ ಬಾ ಚುಟುಕಾಗಿ ಉತ್ತರಿಸಿದರು.

'ನಾನು ಖಂಡಿತ ಅಸ್ಪೃಶ್ಯರ ಹಕ್ಕುಗಳಿಗೆ ವಿರೋಧ ಅಲ್ಲ ಕಸ್ತೂರ್. ಪ್ರತ್ಯೇಕ ಮತಕ್ಷೇತ್ರ ಅನ್ನೋದಕ್ಕೆ ನನ್ನ ವಿರೋಧ. ನಮ್ಮ ಧರ್ಮದೊಳಗೇ ಅವರು ಸಮಾನರಾಗಿರಬೇಕು ಅಂತ ನಾನ್ ಅಭಿಪ್ರಾಯಪಟ್ಟಿದ್ದೆ. ಆದ್ರೆ ಅದೇನಾಯ್ತು ಅಂದ್ರೆ...' ಎಂದು ಗಾಂಧಿ ಸಮಾಜಾಯಿಷಿ ಕೊಡೋದಕ್ಕೆ ಹೋದಾಗ ಕಸ್ತೂರ್‌ಬಾ ತಡೆದು ನುಡಿದರು:

'ಮತ್ತೆ ಸಮಜಾಯಿಷಿ, ಸಮರ್ಥನೆ ಈಗ ಬೇಡ. ಆ ವಿಚಾರದ ಆಳ ಅಗಲ ನಂಗೆ ಅಷ್ಟೊಂದ್ ಅರ್ಥ ಆಗಲ್ಲ.'

'ನಾನು ಅಸ್ಪೃಶ್ಯತೆಯ ಪರಮ ವಿರೋಧಿ, ಅಸ್ಪೃಶ್ಯರ ಪರ, ಅಂತಾದ್ರೂ ಅರ್ಥ ಆಗುತ್ತ?'